ಅತ್ಯಂತ ಸಡಿಲವಾದ ಮತ್ತು ಕಡಿದಾದ ಇಲ್ಲಿನ ಪರ್ವತಗಳಿಂದ ಸದಾ ಭೂಪಾತಗಳಾಗಿ ನದಿಗೆ ಜಾರುವ ಉಸುಕು ಮಣ್ಣು, ಕಲ್ಲು ಮತ್ತು ಮರಳು, ನೀರಿನ ಜೊತೆ ಸೇರಿ ಹರಿಯುವುದರಿಂದ ಅವುಗಳ ರಭಸಕ್ಕೆ ಊಹಿಸಲಾಗದಷ್ಟು ಶಕ್ತಿ ಇರುತ್ತದೆ. ಹಾಗಾಗಿ ಆ ನೀರಿನ ಹರಿತ ಎಷ್ಟು ಅಪಾಯಕಾರಿ ಎಂದರೆ ಅಕಸ್ಮಾತ್ ಅರಿವಿಲ್ಲದೆ ಆ ನದಿಗಳಲ್ಲಿ ಕಾಲಿಟ್ಟರೆ ಅದರ ಬಿರುಸು ನಮ್ಮನ್ನು ಸೆಳೆದು ಹೊತ್ತೊಯ್ದು ಬಿಡುವ ಸಾಧ್ಯತೆಯೂ ಇದೆ. ಹಾಗೆಂದೆ ಬಹಳಷ್ಟು ಜನ ಈ ಕಣಿವೆಗೆ ಹೋಗುವ ಸಾಹಸಕ್ಕೆ ಕೈ ಹಾಕರು. ಅಲ್ಲದೆ ಆ ದಾರಿಯಲ್ಲಿ ಗಡಿ ರಕ್ಷಣೆಯ ಸೈನಿಕರು ತಮ್ಮ ವಾಹನಗಳಲ್ಲಿ ಸದಾ ಸಂಚರಿಸುತ್ತಿರುವುದರಿಂದ ಕೆಲವೆಡೆಯಂತೂ ಅವರ ಹತ್ತಾರು ಟ್ರಕ್‌ಗಳು ಸಾಲಾಗಿ ತಿರುವುಗಳನ್ನು ನಿಭಾಯಿಸಿಕೊಂಡು ಹೋಗುವಾಗ ಇತರೆ ವಾಹನಗಳ ಚಾಲನೆಗೆ ಜಾಗವೇ ಸಿಗುವುದಿಲ್ಲ. ಇದರಿಂದ ನಮ್ಮ ವಾಹನಗಳಿಗೆ ಕೆಲವೊಮ್ಮೆ ಗಂಟೆಗಳ ಕಾಲ ತಡೆಯಾಗಿ ಯಾವಾಗ ಆ ಕಣಿವೆಯನ್ನು ತಲುಪುತ್ತೇವೆ ಅಥವಾ ಯಾವಾಗ ಹಿಂದಿರುಗುತ್ತೇವೆ ಎಂಬ ಬಗ್ಗೆ ಖಚಿತತೆ ಇರುವುದಿಲ್ಲ. ಈ ಕಾರಣದಿಂದಲೆ ಅಲ್ಲಿಗೆ ಹೋಗುವುದು ಒಂದು ಸಾಹಸವೆ ಸರಿ."

"ಹಾಗಿದ್ದಲ್ಲಿ ಆ ನಿರ್ಗಮ ಕಣಿವೆಗೆ ಹೋಗಲೇ ಬೇಕು" ಎಂದೆ. ನನ್ನ ಜೊತೆ ವೀಣಾ ಮತ್ತು ಉಮಾಶಂಕರ್ ಕೂಡ ದನಿಗೂಡಿಸಿದರು.

"ನಿಮ್ಮ ಆಸಕ್ತಿ ತಿಳಿದೇ ಈ ಸ್ಥಳದ ಬಗ್ಗೆ ನಾನು ಹೇಳ ಹೊರಟಿದ್ದು. ಮತ್ತೊಂದು ವಿಷಯ. ಈ ದಾರಿಯಲ್ಲಿ ಪ್ರಯಾಣ ಮಾಡುವಾಗ ಕೆಲವೆಡೆ ಅಲೆಕ್ಸಾಂಡರ್‌ನ ಸೈನ್ಯ ಓಡಾಡಿದ ದಾರಿಗಳನ್ನು ಕೂಡ ಮುಟ್ಟುತ್ತೀರಿ" ಎಂದರು ಬಿಲಾಲ್. ಅದನ್ನು ಕೇಳಿದ ವೀಣಾ ಮುಖದಲ್ಲಿ ಹೆಚ್ಚಿನ ನಗು ಕಂಡಿತ್ತು. ಉಮಾಶಂಕರ್ ಕೇಳಿದ:

"ಅದನ್ನು ಆರ್ಯ ಕಣಿವೆ ಎಂದು ಗುರುತಿಸಿದ್ದು ಯಾರು?"

ಬಿಲಾಲ್ ಬಳಿ ಈ ಪ್ರಶ್ನೆಗೆ ಉತ್ತರವಿರಲಿಲ್ಲ. ನನಗದು ಸ್ವಾಭಾವಿಕ ಅನಿಸಿತ್ತು. ಕಾರಣ, 'ಶಿಲಾಕುಲ ವಲಸೆ' ಕಾದಂಬರಿಯನ್ನು ಬರೆಯುವ ಸಮಯದಲ್ಲಿ ಕಲೆ ಹಾಕಿದ್ದ ಮಾಹಿತಿಯ ಪ್ರಕಾರ 'ಆರ್ಯರು' ಎನ್ನುವ ಜನಾಂಗ ಒಂದು ಸಣ್ಣ ಪಂಗಡವಾಗಲಿ, ಅಥವಾ ಒಂದು ಸಣ್ಣ ಪ್ರದೇಶಕ್ಕೆ ಸೀಮಿತವಾದ ಜನಾಂಗವಾಗಲಿ ಆಗಿರಲಿಲ್ಲ. ಬದಲಿಗೆ ಅವರು ಈಗಿನ ಅಫ್ಘಾನಿಸ್ತಾನ, ಪಾಕಿಸ್ತಾನ ಮತ್ತು ಕಾಶ್ಮೀರವನ್ನೊಳಗೊಂಡ ಭಾರತದ ವಾಯವ್ಯದಲ್ಲಿ ಸಾವಿರಾರು ಚದರ ಕಿ.ಮೀ.ಗಳ ವಿಸ್ತಾರದಲ್ಲಿ ಹರಡಿಕೊಂಡಿದ್ದ ಒಂದು ದೊಡ್ಡ ನಾಗರಿಕತೆಯ ಜನ ಸಮುದಾಯ ಎಂದು ನಂಬಲಾಗಿದೆ. ಹೀಗಿರುವಾಗ ಕೇವಲ ಒಂದು ಕಣಿವೆಯಲ್ಲಿನ ಕೆಲವೇ ಹಳ್ಳಿಗಳಲ್ಲಿ ಮಾತ್ರ ಆರ್ಯರು ನೆಲೆಸಿರಲು ಹೇಗೆ ಸಾಧ್ಯ? ಅಲ್ಲದೆ ಆರ್ಯರು ವಿಸ್ತಾರ ಪ್ರದೇಶದಲ್ಲಿ ಹರಡಿಕೊಂಡಿದ್ದ ಜನಾಂಗವಾದ್ದರಿಂದ ಅವರನ್ನು ಕೆಲವೇ, ನಿರ್ದಿಷ್ಟವಾದ, ಭೌತಿಕ ಗುಣಾವಶೇಷಗಳಿಂದ ಗುರುತಿಸಲೂ ಸಾಧ್ಯವಿಲ್ಲ.

ಹಾಗೆ ಸೀಮಿತ ಪ್ರದೇಶಗಳಲ್ಲಿ ಮೂಲ ಆರ್ಯರು ಇನ್ನೂ ಇರಲು ಸಾಧ್ಯ ಎಂಬ ನಂಬಿಕೆಯನ್ನು ಹುಟ್ಟುಹಾಕಿದ್ದು ಯುರೋಪಿನ ಚರಿತ್ರಕಾರರು. ಆ ನಂಬಿಕೆಗೆ ಕಟ್ಟು ಬಿದ್ದವರು ಕೂಡ ಯುರೋಪಿನ 'ಬುದ್ಧಿವಂತರು'! ಆರ್ಯರನ್ನು ಕೆಲವು ವಿಶಿಷ್ಟ ಹಾಗೂ ಸ್ಪಷ್ಟವಾದ ಭೌತಿಕಗುಣಗಳ ಚೌಕಟ್ಟಿನೊಳಗೆ ಸೇರಿಸಬಹುದು ಹಾಗೂ ಈ ಕಾರಣದಿಂದಲೆ ಅವರನ್ನು ಸುಲಭವಾಗಿ ಗುರುತಿಸಬಹುದು ಎಂಬ ನಂಬಿಕೆಯನ್ನು ಹುಟ್ಟುಹಾಕಿದ್ದು ಕೂಡ ಯುರೋಪಿನ ಚಿಂತಕರು, ಅದರಲ್ಲೂ ಬಹುಪಾಲು ಹಿಟ್ಲರ್‌ನ ಅನುಯಾಯಿಗಳು, ವಿಶೇಷವಾಗಿ ನಾಜಿ